# <u>ಹರಿ ಹರಿ ನಿನ್ನನು ಒಲಿಸಲು ಬಹುದು</u>

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 604.
2. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Gorebala Hanumantha Rayaru.
3. **Note:** There are other versions available in the social media. Some are complete and some are not complete. They are so many similar wordings but are grossly different.
4. **Note:** Singer has followed these lyrics.

ರಾಗ: ಬಿಲಹರಿ ತಾಳ: ಅಟ್ಟ

ಹರಿ ಹರಿ ನಿನ್ನನು ಒಲಿಸಲು ಬಹುದು
ನರಜನರೊಲಿಸೊದು ಬಲು ಕಷ್ಟ ॥ ಪ ॥

ಸರಿ ಬಂದಂತೆ ಆಡುವ ಜನರಿಗೆ
ಕಡೆತನಕಿರುವುದು ಕಲಿ ಕಷ್ಟ ॥ ಅಪ ॥

ಸುಮ್ಮನೆ ಇದ್ದರೆ ಸೇರರು ಸಖರು, ಗಮ್ಮನಾತನೆಂತೆಂಬೊರು
ಉನ್ಮಯದಿಂದ ಬಹಳನ್ನವನುಂಡರೆ ಭೂತ ಪ್ರಾಣಿ ಇವನೆಂಬೊರು
ಕಮ್ಮ್ಯಂಡರೆ ಕಡು ಲೋಭಿಯೆಂಬೊರು, ಉಣದಿದ್ದರೆ ರೋಗ್ಯೆಂಬುವರಯ್ಯ ॥ 1 ॥

ಸುಮ್ಮನೆ ಇದ್ದರೆ ಬಹಳ ಗುರವಿಕೆ ಆತಗೆಂಬರು
ಹೊರ ಬಿಚ್ಚಾಡಲು ಬಾಯಿ ಬಡಕನೆಂಬರು
ಆಡದಿದ್ದರೆ ಮೂಕನೆಂಬರಯ್ಯ ॥ ೨ ॥

ಒಗೆದ ವಸ್ತ್ರವನು ಶುದ್ಧಾಗಿ ಹೊದ್ದರೆ
ಸುಳು ಶೋಕಿನವನಿವನೆಂಬರು
ನಗೆ ಮಾಸಿದರೆ ಹೇಸಿಯೆಂಬರು
ಹೊದಿಯದಿದ್ದರೆ ಹುಚ್ಚನೆಂಬರಯ್ಯ || ೩ ||

ಸತಿಯಾಳ ಸಂಗದಿ ಸೌಖ್ಯವಿದ್ದರೆ
ಸಲಿಗೆ ಕೊಟ್ಟ ಕೋತ್ಯೆಂಬರು
ವ್ರತದ ನಾರೇರ ಸಂಗವ ಬಿಟ್ಟರೆ ನಪುಂಸಕನೆಂತೆಂಬರು
ಅರಿಯದಿದ್ದರೆ ದಡ್ಡನೆಂಬರಯ್ಯ || ೪ ||

ದಡಬಡಿ ಇದ್ದರೆ ಠೊಣ್ಯನೆಂಬರು
ತೆಳುವಿದ್ದರೆ ರೋಗಿಷ್ಠನೆಂಬರು
ಗಳಿಸಿ ಗಳಿಸಿ ಧನವಂತನಾದರೆ
ಪರರ ಒಡವೆ ಕೈ ಸೇರಿತೆಂಬರು
ಕಡೆ ಹಾಯಿಸೊ ಎನ್ನ ಕಠಿಣ ಪಂಢರ-ಪುರ
ದೊಡೆಯ ಶ್ರೀ ಪುರಂದರ ವಿಠ್ಠಲ ಕಡೆದೋರೈ || ೫ ||

**Classification:** Keerthane
**Ankita:** sri purandara vittala
**Location:** NA
**Category:** Jeevanoddhara, Jeevana Darshana
**Sub-Category:** Krishna, jana, olume, ATa, anna, oota, roga, garva, bayi, sullu, huchha, sukha, patni, koti, vrata, hengasu, kai, abharana,
**Pravachana:** NA
**Explanation:** NA